**OS: 42/2014**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 10.10.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ನಂಃ 21 ರವರ ಪರ ವಕೀಲರಿಂದ</u>**

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿ.ಪಿ 87 ರಿಂದ 94 ರ ದಾಖಲೆಗಳು ಈ ದಾವೆಯ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಿ.ಪಿ 99 ರ ದಾಖಲೆಯು 21 ನೇ ಪ್ರತಿವಾದಿಯು ಓ.ಎಸ್ ನಂಃ 32/2011 ರ ಪ್ರಕರಣದಲ್ಲಿ ನೀಡಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ಹೇಳಿಕೆ ಎಂದರೆ ಸರಿ. ಸದರಿ ಪ್ರಕರಣವು ಅಂತಿಮವಾಗಿ ಭಾಗಶಃ ಡಿಕ್ರಿ ಆಗಿದೆ ಎಂದರೆ ಸರಿ. ಸದರಿ ಪ್ರಕರಣದ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ಪ್ರತಿಯನ್ನು ಸಾಕ್ಷಿ ಒಪ್ಪಿದ ಮೇರೆಗೆ ನಿ.ಡಿ 26 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ಮನೆ ನಂಃ 154-ಎ ಮತ್ತು 154-ಬಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಾವು ಸಲ್ಲಿಸಿದ ದಾವೆ ವಜಾ ಆಗಿದೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ನಮ್ಮ ಕುಟುಂಬದ ವಂಶವೃಕ್ಷದ ಬಗ್ಗೆ ಹೇಳಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ವಂಶವೃಕ್ಷವನ್ನು ಸಾಭೀತುಪಡಿಸಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ ಎಂದರೆ ಸರಿಯಲ್ಲ. ಸದರಿ ತೀರ್ಪಿನ ವಿರುದ್ಧ ನಾವು ಇಲ್ಲಿವರೆಗೂ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ತೀರ್ಪಿನ ಮೇಲೆ ಪ್ರತಿವಾದಿ ನಂಃ 21 ಮತ್ತು ಆತನ ಮಕ್ಕಳು ಮೇಲ್ಮನವಿಯನ್ನು ದಾವಣಗೆರೆ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಅಲ್ಲಿಯೂ ಸಹ ವಿಚಾರಣೆ ಮಾಡಿ ನೀಡಿರುವ ತೀರ್ಪು ಸರಿ ಇದೆ ಎಂದು ಮೇಲ್ಮನವಿಯಲ್ಲಿ ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ತೀರ್ಪಿನ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅದು ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ.

ಓ.ಎಸ್ ನಂಃ 32/2011 ರಲ್ಲಿ ವಿವಾದಾಂಶ ಸಂಖ್ಯೆ 4 ರಲ್ಲಿ ನಮ್ಮ ಕುಟುಂಬದ ವಂಶವೃಕ್ಷವನ್ನು ಸಾಭೀತು ಮಾಡಿಲ್ಲ ಎಂಬುದಾಗಿ ನ್ಯಾಯಾಲಯ ಅಭಿಪ್ರಾಯಪಟ್ಟಿದ್ದು ಸದರಿ ವಿಷಯವಾಗಿ ಮೇಲ್ಮನವಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಓ.ಎಸ್ ನಂಃ 32/2011 ರಲ್ಲಿ ನನ್ನ ತಾತನ ಹೆಸರು ಚನ್ನಬಸಪ್ಪ ಎಂದು ಬರೆಸಿದ್ದು ಅದೇ ರೀತಿ ಪ್ರತಿವಾದಿ ನಂಃ 21 ರವರ ತಂದೆಯ ಹೆಸರು ಚನ್ನಬಸಪ್ಪ ಎಂದು ನಾವೇ ಬರೆಸಿ ವಾದ ಪತ್ರ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಮೂಲ ವಾದಿ ತಂದೆ ಚನ್ನಬಸಪ್ಪ ಮತ್ತು ಪ್ರತಿವಾದಿ ನಂಃ 21 ರವರ ತಂದೆ ಚನ್ನಬಸಪ್ಪ, ಈ ಇಬ್ಬರೂ ಸಹ ಚನ್ನಬಸಪ್ಪನ ಮಕ್ಕಳು ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿ

ಮತ್ತು ಪ್ರತಿವಾದಿ ನಂಃ 21 ರವರ ತಾಯಿ ಚಂದ್ರಮ್ಮ ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿ ಹೆಸರು ಚಂದ್ರಮ್ಮ ಅಲಿಯಾಸ್ ಚನ್ನವೀರಮ್ಮ ಆಗಿರುತ್ತದೆ, ಪ್ರತಿವಾದಿ ನಂಃ 21 ರವರ ತಾಯಿಯ ಹೆಸರು ನನಗೆ ಗೊತ್ತಿಲ್ಲ.

ನಿ.ಪಿ 40 ರಲ್ಲಿ ಇರುವ ಹೆಚ್. ಬಸಪ್ಪ ತಂದೆ ಗುರುಬಸಪ್ಪ ನನ್ನ ಕುಟುಂಬಕ್ಕೆ ಆಗಲಿ ಅಥವಾ ಪ್ರತಿವಾದಿ ನಂಃ 21 ರವರ ಕುಟುಂಬಕ್ಕೆ ಆಗಲಿ ಸಂಬಂಧಪಟ್ಟ ವ್ಯಕ್ತಿ ಅಲ್ಲ ಎಂದರೆ ನನ್ನ ಕುಟುಂಬಕ್ಕೆ ಸಂಬಂಧಪಟ್ಟ ವ್ಯಕ್ತಿ ಅಲ್ಲ. ಸದರಿ ವ್ಯಕ್ತಿಗೆ ಮಕ್ಕಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಮಕ್ಕಳು ಇಲ್ಲದ ಕಾರಣ ತಮ್ಮ ಇಳಿಯ ವಯಸ್ಸಿನಲ್ಲಿ ಪ್ರತಿವಾದಿ ನಂಃ 21 ರವರ ಆಶ್ರಯದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ 44 ರ ದಾಖಲೆಯ ಬಗ್ಗೆ ನನ್ನ ತಂದೆ ಹೇಳಿರುತ್ತಾರೆ. ನಿ.ಪಿ 87 ರಿಂದ 94 ರ ದಾಖಲೆಗಳು ನಿ.ಪಿ 44 ರ ಆಸ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿಯಲ್ಲ. ನಿ.ಪಿ 100 ರ ದಾಖಲೆಯನ್ನು ಇಲ್ಲಿಯವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಆ ಬಗ್ಗೆ ನಮಗೆ ಗೊತ್ತಿರಲಿಲ್ಲ. ಈ ದಾವೆಯನ್ನು ಸಲ್ಲಿಸಲು ಆರ್. ಮಹೇಶಪ್ಪ ಎಂದು ನನ್ನ ತಂದೆಯ ಹೆಸರನ್ನು ನಮೂದು ಮಾಡಲಾಗಿದೆ ಎಂದರೆ ಸರಿ. ಓ.ಎಸ್ ನಂಃ 32/2011 ರಲ್ಲಿ ನನ್ನ ತಂದೆಯ ಹೆಸರನ್ನು ಮಹಾದೇವಪ್ಪ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಂದೆಯ ಹೆಸರನ್ನು ಮಹಾದೇವಪ್ಪ ಅಲಿಯಾಸ್ ಮಹೇಶಪ್ಪ ಎಂದು ನಮೂದು ಮಾಡಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್ ನಂಃ 32/2011 ರಲ್ಲಿ ನನ್ನ ತಂದೆಯ ಮನೆತನದ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಎಲ್ಲಾ ದಾಖಲಾತಿಗಳಲ್ಲಿ ಆರ್. ಮಹೇಶಪ್ಪ ಎಂದು ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳಲ್ಲಿ ಜೋಳದ ಕೂಡ್ಲಿಗಿ ಮಹೇಶಪ್ಪ ಎಂಬುದಾಗಿ ಇದೆ ಎಂದರೆ ಸರಿ. ಪ್ರತಿವಾದಿ ನಂಃ 21 ರವರಿಗೆ ಭಾಗಾಂಶ ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಮ್ಮ ತಾತನಿಗೆ ನನ್ನ ತಂದೆ ಒಬ್ಬನೇ ಮಗ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಪ್ರತಿವಾದಿ ನಂಃ 21 ರವರಿಗೆ ಒಬ್ಬ ಸಹೋದರಿ ಗಂಗಮ್ಮ ಎನ್ನುವವರು ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಃ 1 ರಿಂದ 19 ರವರು ನನ್ನ ಅಜ್ಜ ಚನ್ನಬಸಪ್ಪರವರ ಸಹೋದರರ ವಾರಸುದಾರರು ಎಂದರೆ ಸರಿ.

ನಿ.ಪಿ 98 ರ ದಾಖಲೆಯನ್ನು ಮುತ್ತಗಿ ಗ್ರಾಮ ಮತ್ತು ಪೃಥೇಶ್ವರ ಗ್ರಾಮದ ಲೆಕ್ಕಾಧಿಕಾರಿಯವರು ನೀಡಿರುವ ದಾಖಲೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂಃ 21 ಮತ್ತು ಗಂಗಮ್ಮರವರಿಗೂ ಸಹ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ಸದರಿಯವರಿಗೆ

ಭಾಗಾಂಶ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**